"ಅಪ್ಪಾ, ನೋಡು ಅಲ್ಲಿ, ಒಂದು ಹದ್ದು ಇದೆ" ಎಂದು ಹೇಳಿದ. ಒಡನೆ ಮುಗ್ಗರಿಸಿ ಬಿದ್ದು ಕಾಲಿಗೆ ಗಾಯ ಮಾಡಿಕೊಂಡ. ತಂದೆ ಸೊಂಟದಲ್ಲಿ ಕಟ್ಟಿಕೊಂಡಿದ್ದ ಮಗುವು ಕೂಡ ಹದ್ದನ್ನು ನೋಡಿತು; ಚಪ್ಪಾಳೆ ತಟ್ಟಿತು. ಆದರೆ ಕೆಳಗೆ ಬೀಳಲಿಲ್ಲ. ಏಕೆಂದರೆ ತಂದೆ ಅವನನ್ನು ಬಲವಾಗಿ ಹಿಡಿದುಕೊಂಡಿದ್ದ. ಎರಡನೆಯ ಹುಡುಗನೇ ನಮ್ಮ ಆದರ್ಶ. ಭಗವಂತನಲ್ಲಿ ಸಂಪೂರ್ಣ ಶರಣಾಗಿ, ನಮ್ಮ ಕೈಲಾದಷ್ಟು ಪ್ರಯತ್ನ ಮಾಡುತ್ತಲೇ ಇರಬೇಕು. ಇದು ಶ್ರೀರಾಮಕೃಷ್ಣರ ನಿಲುವು.

ಸ್ವಪ್ರಯತ್ನ ಮತ್ತು ಶರಣಾಗತಿಗಳ ನಡುವಣ ವೈಪರೀತ್ಯದ ಈ ಗಂಭೀರ ಸಮಸ್ಯೆಯನ್ನು ಶ್ರೀರಾಮಕೃಷ್ಣರು ಸುಲಭವಾಗಿ ಬಿಡಿಸಿ ತೋರಿಸುತ್ತಾರೆ. ಒಮ್ಮೆ ಅವರು ಭಕ್ತರೊಡನೆ ಮಾತನಾಡುತ್ತಾ, "ಹಸುವನ್ನು ಗೂಟಕ್ಕೆ ಕಟ್ಟಿಹಾಕಿರುವಂತೆ ನಮ್ಮ ಇಚ್ಛೆಯು ಭಗವಂತನ ಇಚ್ಛೆಗೆ ಗಂಟುಬಿದ್ದಿದೆ. ಮನುಷ್ಯನಿಗೇನೋ ಸ್ವಾತಂತ್ರ್ಯವಿದೆ. ಅದು ಆ ಹಸುವಿಗೆ ಇರುವಷ್ಟು ಸ್ವಾತಂತ್ರ್ಯ ಮಾತ್ರ. ಮನುಷ್ಯನ ಇಚ್ಛೆ ಭಗವಂತನ ಇಚ್ಛೆಯ ಮೇಲೆ ನಿಂತಿದೆ ಎಂದು ತಿಳಿ" ಎಂದು ಹೇಳಿದರು.

ಇದಕ್ಕೆ ಭಕ್ತನೊಬ್ಬ ಆಕ್ಷೇಪವೆತ್ತಿದನು; "ಹಾಗಾದರೆ ತಪಸ್ಸು, ಧ್ಯಾನ ಮುಂತಾದ ಸಾಧನೆಗಳನ್ನು ಮಾಡುವ ಆವಶ್ಯಕತೆ ಇಲ್ಲವೇ? ಇದೆಲ್ಲ ದೇವರ ಇಚ್ಛೆ ಎಂದು ಸುಮ್ಮನೆ ಕುಳಿತುಕೊಳ್ಳಬಹುದಲ್ಲ!" ಎಂದನು. ಅದಕ್ಕೆ ಶ್ರೀರಾಮಕೃಷ್ಣರು ಹೀಗೆ ಸಮಾಧಾನ ನೀಡುತ್ತಾರೆ: "ಓ, ಸುಮ್ಮನೆ ಬಾಯಿಯಲ್ಲಿ ಹೇಳಿದರೆ ಬಂತೇನು? ಮುಳ್ಳೇ ಇಲ್ಲ ಎಂದು ಬಾಯಿಯಲ್ಲಿ ಹೇಳಿಕೊಂಡರೂ ಅದರ ಮೇಲೆ ಕೈಯಿಟ್ಟರೆ, ನೋವಾಗುವುದು ತಪ್ಪುವುದಿಲ್ಲ. ಮನುಷ್ಯ ತನ್ನ ಇಚ್ಛೆಯಂತೆ ಸಾಧನೆ ಮಾಡಲು ಸಾಧ್ಯವಾಗಿದ್ದರೆ ಎಲ್ಲರೂ ಹಾಗೆಯೇ ಮಾಡುತ್ತಿದ್ದರು. ಆದರೆ ಎಲ್ಲರಿಗೂ ಹಾಗೆ ಮಾಡಲು ಆಗುವುದಿಲ್ಲ. ಆದರೆ ಇನ್ನೊಂದು ವಿಷಯವಿದೆ. ಭಗವಂತ ನಿನಗೆ ಕೊಟ್ಟಿರುವ ಶಕ್ತಿಯನ್ನು ನೀನು ಸರಿಯಾಗಿ ಉಪಯೋಗಿಸಿಕೊಳ್ಳದಿದ್ದರೆ, ಅವನು ನಿನಗೆ ಇನ್ನೂ ಹೆಚ್ಚು ಶಕ್ತಿಯನ್ನು ಕೊಡುವುದಿಲ್ಲ. ಆದ ಕಾರಣವೇ ಸ್ವಪ್ರಯತ್ನ ಅತ್ಯಗತ್ಯ."

ಆದರೆ, ಶರಣಾಗತನಾದವನು ಗೊಣಗಾಡಬಾರದು ಎಂಬ ಎಚ್ಚರಿಕೆಯನ್ನೂ ಶ್ರೀರಾಮಕೃಷ್ಣರು ನೀಡುತ್ತಾರೆ. ಪರಿಪೂರ್ಣ ಶರಣಾಗತಿಯಲ್ಲಿ ದೇವರ ಇಚ್ಛೆಗೆ ನಮ್ಮ ಇಚ್ಛೆ ಸಂಪೂರ್ಣವಾಗಿ ಅಧೀನವಾಗಿರುತ್ತದೆ. ಇದನ್ನು ನಮಗೆ ಅರ್ಥ ಮಾಡಿಸಲು ಶ್ರೀರಾಮಕೃಷ್ಣರು ಈ ಕಥೆ ಹೇಳುತ್ತಾರೆ: "ರಾಮಲಕ್ಷ್ಮಣರು ಪಂಪಾಸರೋವರದಲ್ಲಿ ಸ್ನಾನಕ್ಕಾಗಿ ಇಳಿದರು. ಆಗ ತಮ್ಮ ಧನುಸ್ಸನ್ನು ನೆಲದ ಮೇಲೆ ಹೂಳಿಟ್ಟರು. ಸ್ನಾನ ಮುಗಿಸಿ ಬಂದು ಲಕ್ಷ್ಮಣ ತನ್ನ ಧನುಸ್ಸನ್ನು ಎತ್ತಿ ನೋಡಿದಾಗ, ಅದರ ಕೆಳಭಾಗ ರಕ್ತಮಯವಾಗಿತ್ತು. ಲಕ್ಷ್ಮಣ ನೆಲವನ್ನು ಅಗೆದು ನೋಡಿದಾಗ, ಅಲ್ಲಿ ಒಂದು ದೊಡ್ಡ ಕಪ್ಪೆ ಇತ್ತು. ಅದು ಸಾಯುವ ಸ್ಥಿತಿಯಲ್ಲಿ ಇತ್ತು. 'ನೀನೇಕೆ ಕೂಗಿಕೊಳ್ಳಲಿಲ್ಲ? ಕೂಗಿದ್ದರೆ ನಿನ್ನನ್ನು ಉಳಿಸಬಹುದಾಗಿತ್ತು. ಹಾವಿನ ಬಾಯಿಗೆ ಸಿಕ್ಕಿದಾಗ ಕಿರಿಚಿಕೊಳ್ಳುತ್ತೀಯಲ್ಲಾ?' ಎಂದು ರಾಮ ದುಃಖದಿಂದ ಹೇಳಿದ. ಅದಕ್ಕೆ ಆ ಕಪ್ಪೆ ಏನೆಂದಿತು ಗೊತ್ತೇ? ಅದು ಹೇಳಿತು, 'ಭಗವಂತ, ನಾನು ಹಾವಿನ ಬಾಯಿಗೆ ಸಿಕ್ಕಿದಾಗ, 'ರಾಮ, ನನ್ನನ್ನು ರಕ್ಷಿಸು' ಎಂದು ಬೇಡಿಕೊಳ್ಳುತ್ತಿದ್ದೆ. ಈ ಸಲ ಕೊಲ್ಲುತ್ತಿರುವುದು ಸ್ವತಃ ರಾಮನೇ. ಅದಕ್ಕೇ ಸುಮ್ಮನೆ ಇದ್ದೆ.' "

## ಕನ್ನಡ ಸಾಹಿತ್ಯದಲ್ಲಿ ಶ್ರೀರಾಮಕೃಷ್ಣರು

### ಶ್ರೀರಾಮಕೃಷ್ಣ ಪರಮಹಂಸದೇವ

(ರಚನೆ: ಡಿ.ಆರ್. ಚನ್ನೇಗೌಡ; ಪ್ರಕಾಶಕರು: ಶ್ರೀರಾಮಕೃಷ್ಣ ಪುಸ್ತಕ ಭಂಡಾರ, ಬಸವನಗುಡಿ, ಬೆಂಗಳೂರು; ವರ್ಷ: ೧೯೩೬)

**ಕರ್ಮರಂಗವಾಗಿರುವ ಈ ಭೂಮಿಯಲ್ಲಿ ಸುಖಕ್ಕಿಂತ ದುಃಖವೇ ಹೆಚ್ಚಾಗಿರುವಂತೆ ತೋರುತ್ತದೆ. ಇಲ್ಲಿ ಜ್ಞಾನಕ್ಕಿಂತ ಅಜ್ಞಾನ, ಸಂಪತ್ತಿಗಿಂತ ಬಡತನ, ಪ್ರೀತಿಗಿಂತ ದ್ವೇಷ ಇವೇ ಮಿಗಿಲಾಗಿ ನಿಂತಿವೆಯೆ? ಜಗತ್ತಿನಲ್ಲಿ ನಾನಾ ಬಗೆಯ ಆಶೆಗಳು ಮಾನವನ ಸುತ್ತ ನಿಂತು, ಅವನು ತಲೆಯೆತ್ತದಂತೆ ತುಳಿದು ಹಾದಿ ತಪ್ಪಿಸಲು ಕಾದಿವೆಯೆ? ಇಂಥ ಪರಿಸ್ಥಿತಿಯಲ್ಲಿ ಶ್ರೀರಾಮಕೃಷ್ಣ ಪರಮಹಂಸದೇವರು ಜಗತ್ತಿನಲ್ಲಿ ಇಡೀ ಮಾನವಕೋಟಿಗೆ, ಕೋಟಿಸೂರ್ಯಪ್ರಕಾಶಮಾನರಾಗಿ ಶೋಭಿಸಿದ್ದಾರೆ. ಅವರದು ಅಖಂಡ ತೇಜಸ್ಸು, ಗಗನ ಸದೃಶ ವಿಶಾಲದೃಷ್ಟಿ. ಸೂರ್ಯದೇವನಂತೆ ಅವರು ಸಮದರ್ಶಿ. ಅನರ್ಘ್ಯ ರತ್ನಗಳನ್ನೊಳಗೊಂಡಿರುವ ಸಮುದ್ರರಾಜನಂತೆ ಆತನು ಸಮಸ್ತಸದ್ಗುಣಗಳ ರತ್ನಾಕರನು. ಸರ್ವಮತಗಳನ್ನು ಸಹನೆಯಿಂದೀಕ್ಷಿಸಿದವರವರು. ಸಕಲರ ಹೃದಯಕ್ಕೂ ಆಪ್ಯಾಯಮಾನವಾಗಿರುವಂಥ ದಿವ್ಯಾಮೃತವು ಆತನ ಸತ್ಯವಾಣಿ. ಕಷ್ಟದಿಂದ ನೊಂದು ಬಂದವರಿಗೆ ಈ ಮಹಾಪುರುಷನು ಅನುಗ್ರಹಿಸಿ ಆಶೀರ್ವಾದ ಮಾಡಿ ಗೆಲುವನ್ನು ತಂದರು. ಉಪಯುಕ್ತವಾದುದೇನನ್ನೂ ಅವರು ಮುಚ್ಚಿಡಲಿಲ್ಲ. ಜಗತ್ತಿಗೆ ಅನುಗ್ರಹಿಸಿ ಆಶೀರ್ವಾದ ಮಾಡುವುದರಲ್ಲಿಯೇ ಅವರ ಶಕ್ತಿಯೆಲ್ಲವೂ ಉಡುಗಿತು. ಶ್ರೀರಾಮಕೃಷ್ಣರಿಗೆ ಈ ಜಗತ್ತಿನಲ್ಲಿ ದೊರಕಬೇಕಾದ ಸಿದ್ಧಿ ಯಾವುದೂ ಇರಲಿಲ್ಲ. ಅವರು ಸ್ವಯಂ ಸಿದ್ಧರು, ಪರಮಾತ್ಮಸ್ವರೂಪರು. ಬೆಂದು ಬೇಗುದಿಗೊಂಡ ಜಗತ್ತಿಗೆ ಜೀವ ಚೈತನ್ಯವಿತ್ತು ಒಲವು ಗೆಲುವು ತರಲು ಆ ದೀನಬಂಧು ಪರಮಕಾರುಣ್ಯದಿಂದ ಭೂಮಿಗೆ ಬಂದಿದ್ದರು.** (ಪುಟ, ೧೨೧)

ಶೋಷಣೆಯ ವಿಶ್ಲೇಷಣೆ

# ಶೋಷಣೆಯ ಬಹುಮುಖಗಳು

ಜಿ.ಎಸ್. ಜಯದೇವ್



**ನಮ್ಮ ಸಮಾಜದಲ್ಲಿನ ವ್ಯಾಪಕ ಶೋಷಣೆಯು ಅಧ್ಯಾತ್ಮ ಮತ್ತು ಮೌಲ್ಯಗಳ ಅಭಾವವನ್ನು ಎತ್ತಿತೋರಿಸುತ್ತದೆ. ಜನಸಾಮಾನ್ಯರ ಅದರಲ್ಲೂ ಸ್ತ್ರೀಯರು ಮತ್ತು ಮಕ್ಕಳ ಶೋಷಣೆಯ ಗಂಭೀರತೆಯನ್ನು ನಮ್ಮ ಜನ ಮತ್ತು ಸರ್ಕಾರ ಅರ್ಥಮಾಡಿಕೊಂಡಿಲ್ಲ. ಈ ಅಂಶವನ್ನು ಸಮಾಜ ಶಾಸ್ತ್ರ ಮತ್ತು ಅಧ್ಯಾತ್ಮ ಪರಿಜ್ಞಾನದ ಸುಮಧುರ ಬೆಸುಗೆಯ ಮೂಲಕ ವ್ಯಕ್ತಪಡಿಸಿರುವ ಲೇಖಕರು ಚಾಮರಾಜನಗರದಲ್ಲಿ ಅನಾಥ ಮಕ್ಕಳ ಮನೆಯನ್ನೂ, ಶಾಲೆಯನ್ನೂ ನಡೆಸುತ್ತಿದ್ದಾರೆ. ಹಾಗೆಯೇ ಮೈಸೂರಿನಲ್ಲಿ ನಿರ್ಗತಿಕ ಸ್ತ್ರೀಯರಿಗಾಗಿ ಆಶ್ರಯಸ್ಥಾನವನ್ನೂ ಸ್ಥಾಪಿಸಿದ್ದಾರೆ.**

## ಇರುವೆಗಳ ಕಥೆ

ಇದೊಂದು ಇರುವೆಗಳ ಕಥೆ. ಕಡುಕೆಂಪು ಬಣ್ಣದ, ಹರಿತ ದಾಡೆಯ ಕ್ರೂರವಾದ ಕೆಂಪು ಇರುವೆಗಳಿಗೆ 'ಅಮೆಜಾನ್ ಇರುವೆ' ಎನ್ನುತ್ತೇವೆ. ಹುಟ್ಟುತ್ತಲೇ ಶಸ್ತ್ರಾಸ್ತ್ರದೊಡನೆ ಹುಟ್ಟುವ ಈ ಯುದ್ಧವೀರರಿಗೆ ಗೂಡು ಕಟ್ಟುವ, ಆಹಾರ ಸಂಗ್ರಹಿಸುವ ಅಥವಾ ಮರಿಗಳನ್ನು ಪೋಷಣೆ ಮಾಡುವ ಕೆಲಸಗಳು ಬರುವುದೇ ಇಲ್ಲ. ಈ ಎಲ್ಲ ಗೃಹಕೃತ್ಯಗಳನ್ನು ಸಹಜವಾಗಿ ಮೈಗೂಡಿಸಿಕೊಂಡ ಕಪ್ಪು ಇರುವೆಗಳು ಶಾಂತಿಪ್ರಿಯರು. ತಮ್ಮ ಪಾಡಿಗೆ ತಾವು ಗೂಡು ಕಟ್ಟಿ, ದಿನವಿಡೀ ದುಡಿದು ಆಹಾರ ಸಂಗ್ರಹಿಸಿ, ತಮ್ಮ ಮರಿಗಳನ್ನು ಲಾಲಿಸಿ ಪೋಷಿಸಿಕೊಂಡು ಶಾಂತಿಯಿಂದ ಬಾಳುತ್ತವೆ.

ಆದರೆ ಕೋರೆದಾಡೆಯ ಕೆಂಪು ಇರುವೆಗಳು ಏಕಾಏಕಿ ಕಪ್ಪು ಇರುವೆಗಳ ಗೂಡಿನ ಮೇಲೆ ದಾಳಿ ಮಾಡಿ, ಅಡ್ಡಬಂದ ಕಪ್ಪು ಇರುವೆಗಳನ್ನು ಕತ್ತರಿಸಿ ಬಿಸಾಕುತ್ತವೆ. ಅನಂತರ ಅವುಗಳ ಗೂಡಿನೊಳಗೆ ಲಗ್ಗೆ ಹಾಕುತ್ತವೆ. ಆಶ್ಚರ್ಯವೆಂದರೆ, ಕಪ್ಪು ಇರುವೆಗಳು ಸಂಗ್ರಹಿಸಿಟ್ಟಿರುವ ಆಹಾರವನ್ನು ಕದಿಯಲು ಅಲ್ಲ. ಕೆಂಪು ಇರುವೆಗಳಿಗೆ ಬೇಕಾಗಿರುವುದು ಕಪ್ಪು ಇರುವೆಗಳ, ಇನ್ನೂ ಕಣ್ಣುಬಿಡದ ಮರಿಗಳು. ಕೆಂಪು ಇರುವೆಗಳು ಈ ಮರಿಗಳಿಗೆ ಸ್ವಲ್ಪವೂ ನೋವಾಗದಂತೆ ಹೊತ್ತುಕೊಂಡು, ತಮ್ಮ ಗೂಡಿಗೆ ಸಾಗಿಸುತ್ತವೆ. ಅವುಗಳ ಗೂಡಿನ ಬಳಿ ಕಾಯುತ್ತಿರುವ ಸೇವಕ ಇರುವೆಗಳು ಈ ಯುದ್ಧವೀರರಿಂದ ಅವು ಕದ್ದು ತಂದ ಕಪ್ಪು ಇರುವೆ ಮರಿಗಳನ್ನು ಜೋಪಾನವಾಗಿ ಗೂಡಿನೊಳಗೆ ಸಾಗಿಸಿ ಬೆಳೆಸುತ್ತವೆ. ಈ ಸೇವಕ ಇರುವೆಗಳು ಯಾವುವು? ಎಲ್ಲಿಂದ ಬಂದವು? ಇವೂ ಕಪ್ಪು ಇರುವೆಗಳೇ! ಹಿಂದಿನ ಬಾರಿ ಕೊಳ್ಳೆಹೊಡೆದು ತಂದ ಕಪ್ಪು ಇರುವೆಯ ಮರಿಗಳು ಬೆಳೆದುನಿಂತು ಕಾಯಕದಲ್ಲಿ ನಿರತವಾಗಿವೆ. ದುಡಿಮೆಯ ಕಾಯಕ ರಕ್ತಗತವಾಗಿರುವ ಈ ಕಪ್ಪು ಇರುವೆಗಳು ಶತ್ರು–ಮಿತ್ರ ಎಂಬ ಭೇದ ಮಾಡದೆ ಕೆಂಪು ಇರುವೆಗಳ ಗೂಡಿನಲ್ಲಿ ಅವಿರತ ದುಡಿಯುತ್ತವೆ. ಕೆಂಪು ಇರುವೆಗಳು ಯುದ್ಧ ಮಾಡುತ್ತವೆ, ಗೂಡನ್ನು ರಕ್ಷಿಸುತ್ತವೆ ಮತ್ತು ಕಪ್ಪು ಇರುವೆಗಳು ಸಂಗ್ರಹಿಸುವ ಆಹಾರವನ್ನು ತಿನ್ನುತ್ತವೆ.

ಈ ಇರುವೆಗಳ ಕತೆಯನ್ನು ಓದುತ್ತಿರುವ ನಿಮಗೆ ಮನುಷ್ಯನ ದುರ್ಬುದ್ಧಿ ಈ ಇರುವೆಗಳಿಗೇಕೆ ಬಂತು



ಎಂದು ಆಶ್ಚರ್ಯವಾಗಬಹುದು. ಆದರೆ ಇರುವೆಗಳು ಈ ಭೂಮಿಯಲ್ಲಿ ನಮಗಿಂತ ಸೀನಿಯರ್! ನಮ್ಮ ಮನುಷ್ಯ ಜನಾಂಗ ಭೂಮಿಗೆ ಬಂದು ಕೇವಲ ಐವತ್ತು ಸಾವಿರ ವರ್ಷಗಳಾಗಿರಬಹುದು. ಆದರೆ ಇರುವೆಗಳು ಭೂಮಿಯ ಮೇಲೆ ಅವತರಿಸಿ ಮಿಲಿಯಗಟ್ಟಲೆ ವರ್ಷಗಳೇ ಆಗಿವೆ. ವಿಕಾಸದ ಹಾದಿಯಲ್ಲಿ ಅನೇಕ ಬಗೆಯ ಸ್ಪರ್ಧೆಗಳು ನಡೆಯುತ್ತವೆ. ಆ ಸ್ಪರ್ಧೆಗಳಲ್ಲಿ ಗೆದ್ದುಬಂದ ಗಟ್ಟಿಗರು ಬದುಕುಳಿಯುತ್ತಾರೆ (Survival of the fittest); ಟೊಳ್ಳುಗಳು ನಶಿಸಿಹೋಗುತ್ತವೆ. ಇದು ಪ್ರಕೃತಿಯ ನಿಯಮ.

## ಪ್ರಕೃತಿಯಲ್ಲಿ ಕಾಣುವ ಶೋಷಣೆ

ಇರುವೆಗಳಂತೆ ಅನೇಕ ಪ್ರಾಣಿ ಪಕ್ಷಿಗಳು ಕೂಡ ಈ ಬಗೆಯ ಶೋಷಣೆಯ ನಡವಳಿಕೆಗಳನ್ನು ತೋರಿಸುತ್ತವೆ. ಡಾರ್ವಿನ್ನನ ವಿಕಾಸವಾದ ಜೀವಜಂತುಗಳ ನಡುವೆ ನಡೆಯುವ ಪ್ರಕ್ರಿಯೆಯನ್ನು ವಸ್ತುನಿಷ್ಠವಾಗಿ, ಸರಿ–ತಪ್ಪುಗಳ ಮೌಲ್ಯಗಳನ್ನು ಆರೋಪಿಸದೆ ನೋಡುವ ಒಂದು ನವೀನ ದೃಷ್ಟಿಯನ್ನು ನಮಗೆ ಕೊಟ್ಟಿದೆ. ಉದಾಹರಣೆಗೆ, ಈ ಇರುವೆಗಳ ನಡುವೆ ನಮಗೆ ಕಾಣುವ ಗುಲಾಮಗಿರಿ ಒಂದು ಘೋರ ಅನ್ಯಾಯದ, ಶೋಷಣೆಯ ಘಟನೆ. ಈ ಗುಲಾಮಗಿರಿ ಪದ್ಧತಿಯ ವಿರುದ್ಧ ಕಪ್ಪು ಇರುವೆಗಳು ಹೋರಾಡಬೇಕು! ಆದರೆ ವಿಕಾಸವಾದದ ವೈಜ್ಞಾನಿಕ ದೃಷ್ಟಿಯಲ್ಲಿ 'ಸ್ವಾರ್ಥ' ಎಂಬುದು ಪ್ರಾಣಿಗಳ ಸಹಜ ಗುಣ. ಆದ್ದರಿಂದ ಈ ಹಿನ್ನೆಲೆಯಲ್ಲಿ ವಸ್ತುನಿಷ್ಠವಾಗಿ ಆಲೋಚಿಸಬಲ್ಲವರು, ವಾಸ್ತವಿಕತೆಯೇ ಸತ್ಯ ಎಂದು ನಂಬಿ ಬದುಕುವ ಎಲ್ಲ ಬುದ್ಧಿವಂತರು, ಸ್ಪರ್ಧಾತ್ಮಕ ಜಗತ್ತಿನಲ್ಲಿ ತಮ್ಮ ತಮ್ಮ ರಕ್ಷಣೆ ಮತ್ತು ಬೆಳವಣಿಗೆಯ ದಾರಿಯನ್ನು ಸ್ವಾರ್ಥದ ಮೂಲಕ ಕಂಡುಕೊಳ್ಳುವುದರಲ್ಲಿ ತಪ್ಪೇನಿಲ್ಲ ಎಂದು ಆಲೋಚಿಸುವುದು ವೈಜ್ಞಾನಿಕ ದೃಷ್ಟಿಯಾಗಿಬಿಡುತ್ತದೆ. ಡಾರ್ವಿನ್ನನ ವಿಕಾಸವಾದವು ಕಳೆದ ಎರಡು ಶತಮಾನಗಳಿಂದ ಮನುಷ್ಯನ ಚಿಂತನೆಯ ಮೇಲೆ ಗಾಢವಾದ ಪ್ರಭಾವವನ್ನು ಬೀರಿದೆ. ಜೊತೆಗೆ ಅರ್ಥಶಾಸ್ತ್ರಜ್ಞರ ಚಿಂತನೆಗಳು ಮತ್ತು ತಾಂತ್ರಿಕ ಬೆಳವಣಿಗೆಯಲ್ಲಿ ಉಂಟಾಗಿರುವ ಹೊಸ ಆವಿಷ್ಕಾರಗಳು, ಹಳೆಯ ಮೌಲ್ಯಾಧಾರಿತ ನಂಬಿಕೆಗಳನ್ನು ಈ ಬಗೆಯ ವೈಜ್ಞಾನಿಕ ಚಿಂತನೆಗಳ ಒರೆಗಲ್ಲಿಗೆ ಹಚ್ಚಿ ಅವುಗಳನ್ನು 'ಅರ್ಥಹೀನ' ಎಂದು ಪಕ್ಕಕ್ಕೆ ತಳ್ಳಿಬಿಡುತ್ತವೆ. ಆದರೆ ಬದುಕು ವೈಯಕ್ತಿಕವಾಗಿ ಎಷ್ಟು ಮುಖ್ಯವೋ ಸಮಷ್ಟಿಯ ಭಾಗವಾಗಿಯೂ ಅಷ್ಟೇ ಮುಖ್ಯ ಎಂಬುದನ್ನು ಸರಿಯಾಗಿ ಮನವರಿಕೆ ಮಾಡಿಕೊಂಡು, **'ತನ್ನಂತೆ ಪರರ ಬಗೆದರೆ ಕೈಲಾಸ ಬಿನ್ನಾಣಮಕ್ಕು ಸರ್ವಜ್ಞ'** ಎಂಬ ಮಾತಿನ ಅರ್ಥವನ್ನು ಇಂದಿನ ವಿಜ್ಞಾನಿ ಮನುಷ್ಯ ಅರ್ಥಮಾಡಿಕೊಳ್ಳಲೇಬೇಕು. ಈ ಅರ್ಥವನ್ನು ಧ್ವನಿಸುವ, ವೈಜ್ಞಾನಿಕ ಮನೋಭಾವಕ್ಕೆ ಸರಿಹೊಂದುವ ಹೊಸ ವಾದಸರಣಿಗಳನ್ನು ನಾವು ಚಿಂತನೆಯ ಮೂಲಕ ಕಂಡುಕೊಳ್ಳಬೇಕು. ಮೌಲ್ಯಗಳು ಮೂಲತಃ ಬದಲಾಗದಿದ್ದರೂ ಅವು ನವೀನ ವೈಚಾರಿಕ ದೃಷ್ಟಿಯಿಂದ ಅನ್ವಯವಾಗಬೇಕಾಗಿದೆ. ಈ ಸಂಬಂಧವಾಗಿ ಹಿಂದೆ ಬಳಸಿದ, ನಂಬಿಕೆಯೇ ಪ್ರಧಾನವಾದ ಅಥವಾ ಪ್ರಶ್ನಿಸದೆ ವಿಧೇಯತೆಯಿಂದ ಒಪ್ಪಿಕೊಳ್ಳುವ ಪದ್ಧತಿ ಇಂದಿನ ಬದಲಾದ ಪರಿಸ್ಥಿತಿಗೆ ಹೊಂದಿಕೆಯಾಗುವುದಿಲ್ಲ. ಆದ್ದರಿಂದ ನಾವು ಹೊಸ ವೈಚಾರಿಕ ಸರಣಿಯ ಮೂಲಕ ಅದೇ ಮೌಲ್ಯಗಳ ಅನಿವಾರ್ಯತೆಯನ್ನು ಮನಗಾಣಬೇಕಾಗಿದೆ. ಈ ಸಂದರ್ಭದಲ್ಲಿ ಪಾಶ್ಚಾತ್ಯ ತತ್ತ್ವಶಾಸ್ತ್ರಜ್ಞ ನೀಶೆಯ ಮಾತು ನೆನಪಿಗೆ ಬರುತ್ತದೆ. "God is dead, face the consequences" – "ದೇವರು ಇಲ್ಲವಾಗಿ ಹೋದನು. ಈಗ ಅದರ ಪರಿಣಾಮಗಳನ್ನು ಎದುರಿಸಿರಿ." (ಪಾಶ್ಚಾತ್ಯ ವಿಚಾರಧಾರೆಯು ದೇವರ ಅಸ್ತಿತ್ವವನ್ನೇನೋ ಅಲ್ಲಗಳೆಯಿತು, ಆದರೆ ಆ ಗಟ್ಟಿ ನಂಬಿಕೆಯು ಸೃಷ್ಟಿಸಿದ್ದ ಮೌಲ್ಯಗಳ ವ್ಯವಸ್ಥೆಗೆ ಪರ್ಯಾಯವನ್ನು ಹುಡುಕಲು ವಿಫಲವಾಯಿತು – ಸಂ.)

## ಮೌಲ್ಯಗಳ ಅಗತ್ಯ

ಪ್ರಾಣಿಗಳ ಜೀವನಕ್ಕೆ ಮೌಲ್ಯಗಳ ಅಗತ್ಯವಿಲ್ಲ. ಆದರೆ ಮನುಷ್ಯನ ಜೀವನಕ್ಕೆ ಅವು ಅತ್ಯಗತ್ಯ. ಈ ಅಂಶವನ್ನು ಸ್ವಾಮಿ ವಿವೇಕಾನಂದರು ಡಾರ್ವಿನ್ನನ ವಿಕಾಸವಾದದ ಬಗ್ಗೆ ಚರ್ಚಿಸುತ್ತ ಸುಂದರವಾಗಿ ವಿವರಿಸುತ್ತಾರೆ. ಕೊಲ್ಕತಾದ ಅಲಿಪುರ ಎಂಬಲ್ಲಿರುವ ಮೃಗಾಲಯಕ್ಕೆ ಭೇಟಿಯಿತ್ತ ಸಮಯದಲ್ಲಿ ಅವರು ಡಾರ್ವಿನ್ನನ ವಿಕಾಸವಾದವು ಪ್ರತಿಪಾದಿಸುವ 'ಸ್ಪರ್ಧೆ ಹಾಗೂ ಹೋರಾಟ' ಮತ್ತು 'ಬಲಶಾಲಿಯಾದುದು ಮಾತ್ರ ಬದುಕುಳಿಯುವ ಪ್ರಕೃತಿಯ ಆಯ್ಕೆಯ ವಿಧಾನ' – ಇವುಗಳನ್ನು ಕುರಿತು ಚರ್ಚಿಸುತ್ತಾರೆ. ಡಾರ್ವಿನ್ ಹೇಳಿದ ಈ ಅಂಶಗಳು

ಪ್ರಾಣಿಪ್ರಪಂಚದ ವಿಕಾಸದಲ್ಲಿ ಅನ್ವಯವಾಗುವುದನ್ನು ನಾವು ಒಪ್ಪಿದರೂ ಮನುಷ್ಯನ ವಿಕಾಸದಲ್ಲಿ ಈ ಕಾಡುನಿಯಮವನ್ನು ಒಪ್ಪಲು ಸಾಧ್ಯವಿಲ್ಲ ಎಂದು ಸ್ವಾಮಿ ವಿವೇಕಾನಂದರು ಅಭಿಪ್ರಾಯ ಪಡುತ್ತಾರೆ. ಏಕೆಂದರೆ, ಪತಂಜಲಿಯು ಹೇಳುವಂತೆ ಬಾಹ್ಯ ಹೋರಾಟಕ್ಕಿಂತ, ಪ್ರಕೃತಿಯನ್ನೇ ತನ್ನೊಳಗೆ ಮೊದಲು ಮನುಷ್ಯ ಆಹ್ವಾನಿಸಿಕೊಳ್ಳುತ್ತಾನೆ (ಆಪೂರಣ); ಅವನ ಆಂತರ್ಯ ದಲ್ಲಿಯೇ ತದನಂತರ ಹೋರಾಟ ಜರುಗುತ್ತದೆ; ಇದರಿಂದ ಮನುಷ್ಯನ ವಿಕಾಸವು ಸಂಭವಿಸುತ್ತದೆ ಎಂದು ಸ್ವಾಮೀಜಿ ವಿವರಿಸುತ್ತಾರೆ. ಒಂದು ಪ್ರಾಣಿ ವಿಕಾಸವಾಗಲು ಲಕ್ಷೋಪಲಕ್ಷ ಜೀವಿಗಳ ದಮನವಾಗುವುದೊಂದೇ ಮಾರ್ಗ ಎಂಬ ವಾದ ಮನುಷ್ಯಪ್ರಪಂಚಕ್ಕೆ ಸರಿಹೊಂದು ವುದಿಲ್ಲ. ಇಂದು ಮನುಷ್ಯ ಪಠಿಸುವ ಮಂತ್ರ **"ಸರ್ವರಿಗೂ ಸಮಪಾಲು – ಸರ್ವರಿಗೂ ಸಮಬಾಳು"** ಎನ್ನುವುದು. ಹಾಗಾಗಿ ಶೋಷಣೆಯ ವಿರುದ್ಧ ಮನುಷ್ಯನ ಹೋರಾಟ ನಾಗರಿಕತೆ ಹುಟ್ಟಿದಾಗಿನಿಂದಲೂ ಸಾಗಿಬಂದಿದೆ. ನಾಗರಿಕತೆಯ ಉದ್ದಕ್ಕೂ ಮನುಷ್ಯ ತನ್ನ ಪಶುಪ್ರವೃತ್ತಿ ಗಳಿಂದ ಬಿಡಿಸಿಕೊಳ್ಳುವ ಪ್ರಯತ್ನ ಮಾಡುತ್ತಲೇ ಇದ್ದಾನೆ. ಏಕೆಂದರೆ ಅವನಿಗೆ ವರ್ತಮಾನದಿಂದ ಮುಂದಕ್ಕೆ ಬಹು ದೂರ ನೋಡಬಲ್ಲ ವೈಚಾರಿಕ ಶಕ್ತಿ ಇದೆ. 'ಸಾವಿನ ಅರಿವು' ಎನ್ನುವುದು, ಮೌಲ್ಯಗಳ ಮೂಲಕ ಹೊಸ ಹೊಸ ಅರ್ಥಗಳನ್ನು ಬದುಕಿಗೆ ಹೆಣೆದುಕೊಟ್ಟಿದೆ. ಇದರ ಫಲವಾಗಿಯೇ ಧರ್ಮಗಳು ಹುಟ್ಟಿಕೊಂಡಿವೆ. ದೈಹಿಕವಾಗಿ ದುರ್ಬಲನಾದವನಿಗೂ ಅವಕಾಶ ನೀಡುವು ದನ್ನೇ ಮನುಷ್ಯಜನ್ಮದ ಗುರಿಯಾಗಿ ಸಮಾಜ ಕಂಡು ಕೊಂಡಿದೆ. ಇದನ್ನೇ ನಾವು 'ನಿಸ್ವಾರ್ಥತೆ' ಎಂದು ಕರೆಯುವುದು. "ದುರ್ಬಲನಾದವನು ನನಗೆ ನೇರವಾಗಿ ಸಂಬಂಧಿಸದೆ ದೂರದಲ್ಲಿ ಎಲ್ಲೋ ಬದುಕಿರಬಹುದು. ಆದರೂ ನಮ್ಮ ಈ ಸಾಮಾಜಿಕ ವ್ಯವಸ್ಥೆ ನನ್ನ ಶ್ರಮದ ಫಲವನ್ನು ಆ ದುರ್ಬಲನಿಗೆ ತಲುಪಿಸಬೇಕು" ಎಂಬುದೇ ಈ ಸಂಘಜೀವನದ ಸಿದ್ಧಾಂತ. ಕಮ್ಯುನಿಸ್ಟ್ ಸರ್ಕಾರ ವಾಗಲಿ, ಸೋಷಿಯಲಿಸ್ಟ್ ಸರ್ಕಾರವಾಗಲಿ ಅಥವಾ ಪ್ರಜಾಸತ್ತಾತ್ಮಕ ವ್ಯವಸ್ಥೆಯಾಗಲಿ, ಮೂಲದಲ್ಲಿ ಒಟ್ಟಾರೆ ಯಾಗಿ ಒಪ್ಪುವ ಸಿದ್ಧಾಂತ ಇದೇ ಆಗಿದೆ. ಆದ್ದರಿಂದ ಮನುಷ್ಯನ ಪಶುಪ್ರವೃತ್ತಿಗಳು ಅವನಿಗೆ ಎಷ್ಟು ಬಗೆಯ ಸ್ವಾರ್ಥಪ್ರವೃತ್ತಿಗಳನ್ನು ಕಲಿಸಿದರೂ ಪತಂಜಲಿ ಹೇಳುವ ಈ 'ಆಪೂರಣ' ಕ್ರಿಯೆ, ಎಂದರೆ ತನ್ನೊಳಗೇ ನಡೆಯುವ ಆಂತರಿಕ ವಿಕಾಸಕ್ರಿಯೆ, ಕೊನೆಗೆ ಅನಿವಾರ್ಯವಾಗಿ, 'ನಿಸ್ವಾರ್ಥತೆ'ಯಲ್ಲಿ ಕೊನೆಗೊಳ್ಳುತ್ತದೆ. ಆದ್ದರಿಂದಲೇ ಸ್ವಾಮೀಜಿ ಹೇಳುತ್ತಾರೆ, "ಯಾವ ದೇಶವೂ ತನ್ನ ಸಂಸತ್ತು ನಿಗದಿಪಡಿಸಿದ ಕಾನೂನು ಕಟ್ಟಳೆಗಳಿಂದಾಗಿ ಶ್ರೇಷ್ಠವಾಗುವುದಿಲ್ಲ. ಅಲ್ಲಿಯ ಜನ ಮೂಲತಃ ಒಳ್ಳೆಯವ ರಾಗಿದ್ದರೆ ಮಾತ್ರವೇ ಆಗ ಆ ದೇಶವು ಶ್ರೇಷ್ಠವಾಗುತ್ತದೆ." ಮನುಷ್ಯ ಈ ಮೂಲಭೂತ ಶ್ರೇಷ್ಠತೆಯನ್ನು ಪಡೆಯುವ ವರೆಗೂ ಶೋಷಣೆ ತಪ್ಪಿದ್ದಲ್ಲ. ಇದಲ್ಲದೆ, ಸ್ವಾಮಿ ವಿವೇಕಾನಂದರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುತ್ತಾರೆ, "ಎಲ್ಲ ಜೀವಿಗಳಲ್ಲೂ ದೈವಿಕತೆ ಅಂತರ್ಗತವಾಗಿದೆ" ಎಂದು.

## ಪ್ರೀತಿಯಿಂದ ಜೀವನ ಮೌಲ್ಯಗಳು

ಅಮಾನವೀಯವಾದ ಗುಲಾಮಗಿರಿಯ ಶೋಷಣೆ ಯನ್ನು ಪ್ರಪಂಚದ ಅನೇಕ ಭಾಗಗಳಲ್ಲಿ ಚರಿತ್ರೆಯ ಉದ್ದಕ್ಕೂ ಕಾಣುತ್ತೇವೆ. ಆಫ್ರಿಕಾದ ಕಪ್ಪು ಜನರನ್ನು ಬಿಳಿ ಜನರು ಗುಲಾಮರನ್ನಾಗಿ ಮಾಡಿಕೊಂಡು ಪ್ರಪಂಚ ದಾದ್ಯಂತ ಮಾರಿದರು. ಅರಬರು ಗುಲಾಮರನ್ನು ಇಟ್ಟು ಕೊಂಡಿದ್ದರು. ಆದರೆ ಮುಸಲ್ಮಾನನಾಗಿ ಮತಾಂತರ ಗೊಂಡರೆ ಒಡೆಯ ಅವನನ್ನು ಬಿಡುಗಡೆ ಮಾಡುವ ಸಾಧ್ಯತೆ ಇತ್ತು. ಯೂರೋಪ್, ಅಮೆರಿಕ, ಗ್ರೀಸ್, ರೋಮ್‌ಗಳಲ್ಲಿ ಗುಲಾಮಗಿರಿ ಪದ್ಧತಿ ಇತ್ತು. ಆಶ್ಚರ್ಯ ವೆಂದರೆ ಗ್ರೀಕರ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲೂ ಹೆಚ್ಚು ಕಡಿಮೆ ಯಜಮಾನರುಗಳಷ್ಟೇ ಸಂಖ್ಯೆಯ ಗುಲಾಮರೂ ಇದ್ದರು. ನಿಜ ಹೇಳಬೇಕೆಂದರೆ ಒಡೆಯರಿಗಿಂತ ಗುಲಾಮರ ಸಂಖ್ಯೆಯೇ ಜಾಸ್ತಿ ಇತ್ತು.

ಗುಲಾಮರನ್ನು ಹದ್ದುಬಸ್ತಿನಲ್ಲಿ ಇಡಲು ಈ ಒಡೆಯರು ಸೈನ್ಯಶಕ್ತಿಯನ್ನು ಬಳಸಬೇಕಾಗಿತ್ತು. ಆ ಕಾಲದ ತತ್ವಶಾಸ್ತ್ರಜ್ಞರಾದ ಅರಿಸ್ಟಾಟಲ್, ಪ್ಲೇಟೊ ಮುಂತಾದವರು ಗುಲಾಮಗಿರಿ ಪದ್ಧತಿಯನ್ನು ಸಹಜವೋ ಎಂಬಂತೆ ಒಪ್ಪಿಕೊಂಡು, ಗುಲಾಮರ ಬಗ್ಗೆ ಸ್ವಲ್ಪವೂ ಕನಿಕರಪಡದೆ ತಮ್ಮಷ್ಟಕ್ಕೆ ತಾವು ಇದ್ದದ್ದು ಆಶ್ಚರ್ಯದ ವಿಷಯವೇ ಸರಿ! ಈ ತತ್ವಚಿಂತಕರು ತಮ್ಮ ಹೃದಯದ ದ್ರವ್ಯವನ್ನೆಲ್ಲಾ ಮಿದುಳಿಗೇ ವರ್ಗಾಯಿಸಿ ದ್ದರೋ ಏನೋ! ಏಕೆಂದರೆ ತಮ್ಮ ಕಣ್ಣೆದುರಿಗೇ ವ್ಯಕ್ತಿತ್ವಹೀನರಾಗಿ ಇಡೀ ಬಾಳನ್ನು ಸವೆಸುತ್ತಿದ್ದ ಗುಲಾಮ ರನ್ನು, ತಮ್ಮಂತೆಯೇ ಬದುಕಬಹುದಾದ ಮನುಷ್ಯರನ್ನಾಗಿ ಅವರ ಪ್ರಖರವಾದ, ಉದಾರವಾದ ತತ್ವಚಿಂತನೆ ಗಳೊಂದೂ ಪರಿಗಣಿಸಲೇ ಇಲ್ಲ. ಪ್ರೀತಿ ಹುಟ್ಟುವುದು ಬಹುಶಃ ಹೃದಯದಿಂದ. ಈ ಮನುಷ್ಯಸಹಜವಾದ ಪ್ರೀತಿ ಇವರಿಗೆ ಇದ್ದಿದ್ದರೆ, ತಮ್ಮ ಗುಲಾಮರ ಬಗ್ಗೆ ಸ್ವಲ್ಪ ವಾದರೂ ಕಳಕಳಿಯನ್ನು ಆ ಮಹಾನ್ ಬುದ್ಧಿಜೀವಿಗಳು ವ್ಯಕ್ತಪಡಿಸುತ್ತಿದ್ದರೇನೋ! ಈ ವಾದ ಸರಣಿಯಿಂದ ನಿರ್ಧರಿಸಬಹುದಾದದ್ದು ಏನೆಂದರೆ, **ಪ್ರೀತಿಯಿಂದ ಜೀವನಮೌಲ್ಯಗಳು ಹುಟ್ಟುತ್ತವೆ; ಪ್ರೀತಿಯ ಅಭಾವವೇ ನೈತಿಕತೆಯ ಕೊರತೆಗೆ ಕಾರಣ ಎನ್ನುವುದು. ಈ ಪ್ರೀತಿಯ ಮೂಲದಿಂದಲೆ ನಮ್ಮ ಆತ್ಮಸಾಕ್ಷಿ ಹುಟ್ಟುವುದು ಕೂಡ.**

ಭಾರತದಲ್ಲಿ ಈ ಬಗೆಯ ಗುಲಾಮಗಿರಿ ಇಲ್ಲದೇ ಇದ್ದದ್ದು ಒಂದು ಗಮನಾರ್ಹ ವಿಷಯ. ಆದರೆ ಶ್ರೇಣೀ ಕೃತ ಸಮಾಜದಿಂದಾಗಿ ಮೇಲುಕೀಳುಗಳು ಸೃಷ್ಟಿಸಿದ ಭ್ರಮಾತ್ಮಕ ಶ್ರೇಷ್ಠ–ಕನಿಷ್ಠ ಭೇದಗಳು ಭಾರತದ

ಜನಸಂಖ್ಯೆಯ ದೊಡ್ಡದೊಂದು ಭಾಗವನ್ನು ವ್ಯಕ್ತಿತ್ವಹೀನ ಸ್ಥಿತಿಗೆ ದಬ್ಬಿ ಬಿಟ್ಟಿತು. ಇದಕ್ಕೆ ಕಾರಣರಾದ ಪ್ರಕಾಂಡ ಪಂಡಿತರಲ್ಲೂ ನಾವು ಪ್ರೀತಿಯ ಅಭಾವವನ್ನೇ ಗುರುತಿಸ ಬೇಕಾಗುತ್ತದೆ. ಈ ಶ್ರೇಷ್ಠ ಪಂಡಿತರು ವೇದಾಂತದ ಏಕತೆಯನ್ನು ತಾತ್ವಿಕವಾಗಿ ಪ್ರತಿಪಾದಿಸುತ್ತಿದ್ದರು. ಆದರೆ ವಾಸ್ತವದಲ್ಲಿ ನಿಸ್ವಾರ್ಥಿಗಳಾಗುವ ಶಕ್ತಿಯನ್ನು ಅವರು ಪಡೆಯಲೇ ಇಲ್ಲ. ಪ್ರೀತಿಯ ಅಭಾವವೇ ಇದಕ್ಕೆ ಕಾರಣ. ಈ ಸಂದರ್ಭದಲ್ಲಿ "ಧರ್ಮ ಇರುವುದು ಪ್ರೀತಿಯಲ್ಲಿ" ಎಂಬ ಸ್ವಾಮಿ ವಿವೇಕಾನಂದರ ಮಾತು ಮನೋಜ್ಞ ವಾಗಿದೆ. ಸ್ವಾಮಿ ವಿವೇಕಾನಂದರು ಗುಡಿಸಲುವಾಸಿ ಶ್ರೀಸಾಮಾನ್ಯ ಕಳೆದುಕೊಂಡ ವ್ಯಕ್ತಿತ್ವವನ್ನು ಅವನಿಗೆ ಮರಳಿ ಒದಗಿಸಬಲ್ಲ ಔದಾರ್ಯತೆ ಇದೇ ಏನು ಎಂದು ಸುಶಿಕ್ಷಿತರಿಗೆ ಸವಾಲು ಹಾಕುತ್ತಾರೆ. ಸ್ವಾಮೀಜಿಯವರ ಧರ್ಮ ಇದ್ದದ್ದು ಪ್ರೀತಿಯಲ್ಲಿ. ಆದ್ದರಿಂದಲೇ ಅವರು ಬುದ್ಧನನ್ನು ಬಹುವಾಗಿ ಮೆಚ್ಚಿಕೊಂಡಿದ್ದು, ಬುದ್ಧನ ಮಿದುಳಿಗಿಂತ ಹೆಚ್ಚಾಗಿ ಅವನು ತೋರಿದ ಪ್ರೀತಿಗಾಗಿ.

### ಸ್ತ್ರೀಯರು ಮತ್ತು ಮಕ್ಕಳ ಶೋಷಣೆ

ಭಾರತ ಇಂದು ಪ್ರಪಂಚದಲ್ಲೇ ಅತ್ಯಂತ ದೊಡ್ಡ ಪ್ರಜಾಸತ್ತಾತ್ಮಕ ದೇಶ. ಬೃಹತ್ ಜನಸಂಖ್ಯಾ ಸಮಸ್ಯೆಯ ಜೊತೆಗೆ ಹಸಿವು, ಬಡತನ, ನಿರಕ್ಷರತೆಗಳು ಮನುಷ್ಯ ಮನುಷ್ಯರ ನಡುವೆ ಇಲ್ಲಿ ಕಂಡುಬರುತ್ತಿರುವ ಅತ್ಯಂತ ಕೀಳುಮಟ್ಟದ ಶೋಷಣೆಗೆ ಕಾರಣವಾಗಿವೆ. ೧೨೧ ಕೋಟಿ ಜನರಿರುವ ನಮ್ಮ ದೇಶದ ಲಿಂಗಾನುಪಾತವನ್ನು ಗಮನಿಸಿದರೆ ಸ್ತ್ರೀಯರ ಮತ್ತು ಮಕ್ಕಳ ಶೋಷಣೆ ಅವ್ಯಾಹತವಾಗಿ ಮುಂದುವರಿದಿರುವುದು ತಿಳಿದುಬರು ತ್ತದೆ. ಪುರುಷರ ಸಂಖ್ಯೆ ಸ್ತ್ರೀಯರ ಸಂಖ್ಯೆಗಿಂತ ಅಸಹಜ ವಾಗಿ ಜಾಸ್ತಿಯಾಗಿರುವುದು, ಸ್ತ್ರೀಭ್ರೂಣಹತ್ಯೆ ಮತ್ತು ಸ್ತ್ರೀಶಿಶುಹತ್ಯೆಗಳು ನಡೆಯುತ್ತಿರುವುದನ್ನು ಸೂಚಿಸುತ್ತದೆ. ಪುರುಷ ಪ್ರಧಾನವಾದ ನಮ್ಮ ಸಮಾಜದಲ್ಲಿ ಸ್ತ್ರೀಯರ ಸ್ಥಿತಿಗತಿಗಳು ಚಿಂತಾಜನಕವಾಗಿವೆ. ಪೌಷ್ಟಿಕ ಆಹಾರ ಹಾಗೂ ಆರೋಗ್ಯಸೇವೆಗಳು ಮೊದಲು ಪುರುಷರಿಗೆ ದೊರೆತು, ಅನಂತರವಷ್ಟೇ ಉಳಿದರೆ, ಸ್ತ್ರೀಯರನ್ನು ತಲುಪುತ್ತಿವೆ. ಮನೆಮನೆಗಳಲ್ಲೂ ನಡೆಯುವ ಮಹಿಳೆ ಯರ ಶೋಷಣೆಯ ತಡೆಗಾಗಿ 'ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ' ಮುಂತಾದ ಸ್ತ್ರೀರಕ್ಷಣಾ ಕಾಯ್ದೆಗಳನ್ನು ನಾವು ರೂಪಿಸುವ ಆವಶ್ಯಕತೆ ಒದಗಿಬಂದಿದೆ.

ಭಾರತದ ಜನಸಂಖ್ಯೆಯಲ್ಲಿ ಶೇಕಡ ೪೪ ಭಾಗ ಮಕ್ಕಳೇ ಇದ್ದಾರೆ. ಇಂದು ಸ್ತ್ರೀಯರಂತೆ ಮಕ್ಕಳು ಸಹ ಅನಿವಾರ್ಯವಾಗಿ ದುರ್ಬಲರು. ಹಾಗಾಗಿ ಈ ದುರ್ಬಲರ ಶೋಷಣೆ ನಿರಾತಂಕವಾಗಿ ನಡೆದೇ ಇದೆ. ಪ್ರಪಂಚದಲ್ಲೇ ಅತ್ಯಂತ ಹೆಚ್ಚಿನ ಸಂಖ್ಯೆಯ ಬಾಲ ಕಾರ್ಮಿಕರು ನಮ್ಮ ದೇಶದಲ್ಲಿದ್ದಾರೆ. ಆದರೂ ಮಕ್ಕಳ ಕಲ್ಯಾಣಕ್ಕಾಗಿ ಮೀಸಲಿಡುವ ಹಣ ಅತ್ಯಲ್ಪ. ನಮ್ಮ ರಾಷ್ಟ್ರೀಯ ಆಯವ್ಯಯ ಪತ್ರವನ್ನು ಗಮನಿಸಿ. ಇದರಲ್ಲಿ ಅತಿ ಹೆಚ್ಚು ಎಂದರೆ ಶೇಕಡ ೫ ಭಾಗವನ್ನು ಮಾತ್ರ ನಾವು ಮಕ್ಕಳಿಗಾಗಿ ಮೀಸಲಿಟ್ಟಿದ್ದೇವೆ. ಇದರಲ್ಲೂ ೪ ಭಾಗ ಶಿಕ್ಷಣಕ್ಕೆ ಖರ್ಚಾಗಿ ಹೋಗುತ್ತದೆ. ಇನ್ನು ಉಳಿದ ಒಂದು ಭಾಗದಲ್ಲಿ ಮಕ್ಕಳ ಕಲ್ಯಾಣ ಕಾರ್ಯಕ್ರಮ ಗಳನ್ನು ಕೈಗೊಳ್ಳಬೇಕು. ಜನಸಂಖ್ಯೆಯ ಶೇಕಡ ೪೪ ಭಾಗ ಇರುವ ಮಕ್ಕಳಿಗೆ ಶೇಕಡ ೫ ಭಾಗ ಮಾತ್ರ ಆರ್ಥಿಕ ಅನುದಾನ ಇರುವುದು ಏನನ್ನು ಸೂಚಿಸುತ್ತದೆ? ಈ ಅನ್ಯಾಯವನ್ನು ಮಕ್ಕಳು ಪ್ರತಿಭಟಿಸಬೇಕೇ ಅಥವಾ ಮಕ್ಕಳ ಪರ ಕಾಳಜಿಯುಳ್ಳ ನಾವು ಪ್ರತಿಭಟಿಸಬೇಕೇ? 'ಮಕ್ಕಳು ಮುಂದಿನ ಪ್ರಜೆಗಳು' ಎಂದು ಬಾಯಲ್ಲಿ ಹೇಳುತ್ತೇವೆ. ಆದರೆ ಅವರ ಅಭಿವೃದ್ಧಿಗಾಗಿ ನಾವು ಮೀಸಲಿಡುವ ಹಣ ಮಾತ್ರ ಏಕೆ ಇಷ್ಟು ಕಡಮೆ?

ಹೀಗೆ ಇಡೀ ವ್ಯವಸ್ಥೆಯೇ ಶೋಷಣೆಯ ಅಂಗವಾಗಿ ಕೆಲಸ ಮಾಡುತ್ತಿರುವಾಗ, ದೈಹಿಕವಾಗಿ ದುರ್ಬಲರಾದ ಹೆಂಗಸರು ಮತ್ತು ಮಕ್ಕಳು ಶೋಷಣೆಗೆ ಒಳಗಾಗು ವುದರಲ್ಲಿ ಏನಾಶ್ಚರ್ಯ? ಅಂತಾರಾಷ್ಟ್ರೀಯ ಸಮು ದಾಯಗಳು ನಮ್ಮ ದೇಶದಲ್ಲಿ ನಡೆಯುತ್ತಿರುವ ಮಕ್ಕಳ ಶೋಷಣೆಯನ್ನು ಕುರಿತು ಅಧ್ಯಯನ ನಡೆಸಿ ನಮ್ಮನ್ನು ಎಚ್ಚರಗೊಳಿಸಬೇಕಾಗಿರುವ ಹೀನಸ್ಥಿತಿಯಲ್ಲಿ ನಮ್ಮ ವ್ಯವಸ್ಥೆ ಇದೆ.

ಚಾಮರಾಜನಗರದಂತಹ ಸಣ್ಣ ಜಿಲ್ಲೆಯಲ್ಲಿ ಸುಮಾರು ೯೬ ಸಾವಿರ ಮಕ್ಕಳಿದ್ದಾರೆ ಎಂದು ಗುರುತಿಸಲಾಗಿದೆ. ಇವರಲ್ಲಿ ಶೇಕಡ ೨೭ ಭಾಗ ಮಕ್ಕಳು ಬಾಲಕಾರ್ಮಿಕರು ಎಂದು ಐ.ಎಲ್.ಒ. (International Labour Organisation) ವರದಿ ತಿಳಿಸುತ್ತದೆ. ಇದಲ್ಲದೆ ಅಪಾಯಕಾರಿ ಕೆಲಸಗಳು ಎಂದು ಕರೆಯುವ ಅನೇಕ ಕೆಲಸಗಳನ್ನು ನಾವು ಮಕ್ಕಳಿಂದಲೇ ಮಾಡಿಸುತ್ತೇವೆ. ಶಿವಕಾಶಿಯ ಪಟಾಕಿ ಕಾರ್ಖಾನೆಗಳು ಎಲ್ಲರಿಗೂ ತಿಳಿದ ಇಂತಹ ಒಂದು ಉದಾಹರಣೆ. ಪಟಾಕಿ ಮಾಡುವಂತಹ ಅಪಾಯಕಾರಿ ಕೆಲಸಗಳಿಗೆ ನಾವು ಮುಗ್ಧ ಮಕ್ಕಳನ್ನು ಬಳಸಿಕೊಳ್ಳುತ್ತಿದ್ದೇವೆ. ನಮ್ಮ ದೇಶದ ಲಕ್ಷಾಂತರ ಮಕ್ಕಳು ತಂದೆತಾಯಿಗಳು ಮಾಡಿದ ಸಾಲವನ್ನು ತೀರಿಸಲು ಜೀತದಾಳುಗಳಾಗಿ ಕೆಲಸ ಮಾಡುತ್ತಿದ್ದಾರೆ.

### ಮಕ್ಕಳ ಶೋಷಣೆಯ ಪರಿಣಾಮ

ಬಾಲ್ಯವನ್ನು ಪಡೆಯುವ ಮೊದಲೇ ಕಳೆದುಕೊಳ್ಳುವ ಈ ಮಕ್ಕಳ ಮುಂದಿನ ಜೀವನ ಎಷ್ಟು ಕಠೋರವಾಗಿರ ಬಹುದೆಂದು ನಾವು ಊಹಿಸಬಹುದು. ಮಕ್ಕಳ ಶೋಷಣೆಯ ಪರಿಣಾಮವನ್ನು ನಾವು ಸರಿಯಾಗಿ ಊಹಿಸಲಾರೆವು. ಏಕೆಂದರೆ ಇಂದಿನ ಶೋಷಣೆಯಿಂದ ಮಕ್ಕಳು ನಕಾರಾತ್ಮಕ ಧೋರಣೆಯುಳ್ಳ ವ್ಯಕ್ತಿಗಳಾಗಿ ರೂಪುಗೊಂಡು ತಾವು ಪಡೆದ ಬಾಲ್ಯದ ಅನುಭವದ